**ಸಿ.ಸಿ. ನಂ.: 1312/2020**

ಸಿ.ಡಬ್ಲ್ಯೂ: 9

ಪಿ.ಡಬ್ಲ್ಯೂ: 8

**ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ.ದ. ನ್ಯಾ ದಂಡಾಧಿಕಾರಿಗಳ ನ್ಯಾಯಾಲಯ, ಕುಮಟಾ**

| | | |
|---|---|---|
| ಸಾಕ್ಷಿದಾರರ ಹೆಸರು | : | ಇಸಾಕ್ ಅಬು ಸಾಲಿಯಾ |
| ತಂದೆ/ಗಂಡನ ಹೆಸರು | : | ಇಂಗ್ರೇಜಿ ಅಬು ಸಾಲಿಯಾ |
| ವಯಸ್ಸು | : | 41 ವರ್ಷ |
| ಉದ್ಯೋಗ | : | ಮೀನುಗಾರಿಕೆ |
| ವಾಸ್ತವ್ಯ | : | ವನ್ನಳ್ಳಿ |

(ಇಂದು ದಿಃ 14-06-2023 ರಂದು ಸತ್ಯಪ್ರತಿಜ್ಞೆಯ ಮೇರೆಗೆ ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.)

**ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ**

ನನಗೆ ಚಾಸಾ.8ರವರ ಪರಿಚಯ ಇದೆ. ನಾನು ಆರೋಪಿತರನ್ನು ಇಂದಿಗೂ ಪೂರ್ವದಲ್ಲಿ ನೋಡಿರುವುದಿಲ್ಲ. ಸಾಕ್ಷಿಗೆ ಒಂದು ದಾಖಲಾತಿಯ ಧೃಡೀಕೃತ ಪ್ರತಿಯನ್ನು ತೋರಿಸಲಾಗಿ, ಅದರಲ್ಲಿ ತಮ್ಮ ಸಹಿ ಕಂಡುಬರುವುದಾಗಿ ಒಪ್ಪಿದ್ದು, ಸದರಿ ದಾಖಲಾತಿ ಪಂಚನಾಮೆಯಾಗಿದ್ದು, ಅದನ್ನು ನಿ.ಪಿ.10 ಎಂದೂ, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.10(ಎ) ಎಂದು ಗುರುತಿಸಲಾಯಿತು. (ಸದ್ರಿ ದಾಖಲಾತಿಯ ಮೂಲ ಪ್ರತಿ ಸಿಸಿ ನಂ. 1313/2020ರಲ್ಲಿ ಹಾಜರುಪರಿಸಲಾಗಿದ್ದು, ಸದ್ರಿ ಪ್ರಕರಣದಲ್ಲಿ ಸದ್ರಿ ದಾಖಲಾತಿಯನ್ನು ನಿಪಿ.10 ಎಂದು ಗುರುತಿಸಲಾಗಿರುತ್ತದೆ) ಸದರಿ ಸಹಿಯನ್ನು ಸುಮಾರು 3 ರಿಂದ 4 ವರ್ಷಗಳ ಹಿಂದೆ ಕುಮಟಾದ ಬಸ್ ನಿಲ್ದಾಣದ ಬಳಿ ಮಾಡಿರುತ್ತೇನೆ. ಯಾವ ವಿಚಾರಕ್ಕೆ ಸಹಿ ಮಾಡಿರುತ್ತೇನೆ ಎಂದು ನನಗೆ ಗೊತ್ತಿಲ್ಲ. ನಿ.ಪಿ. 10 ರಲ್ಲಿ ಏನು ಬರೆಯಲಾಗಿದೆ ಎಂದು ನನಗೆ ಗೊತ್ತಿಲ್ಲ. ಸಾಕ್ಷಿಗೆ 2 ಫೋಟೋಗಳನ್ನು ತೋರಿಸಲಾಗಿ ಅದರಲ್ಲಿ ತಾವು ಕಂಡುಬರುವುದಾಗಿ ಒಪ್ಪಿದ್ದು, ಸದರಿ ಫೋಟೋಗಳನ್ನು ಈಗಾಗಲೇ ನಿ.ಪಿ. 11 ಮತ್ತು 12 ಎಂದು ಗುರುತಿಸಲಾಗಿರುತ್ತದೆ.

**ಸಿ.ಸಿ. ನಂ.: 1312/2020**

ಸಿ.ಡಬ್ಲ್ಯೂಃ 9

ಪಿ.ಡಬ್ಲ್ಯೂಃ 8

ಸದರಿ ಫೊಟೋಗಳನ್ನು ನಾನು ದಾಖಲಾತಿಗೆ ಸಹಿ ಮಾಡಿದ ಸಂದರ್ಭದಲ್ಲಿ ತೆಗೆದಿರುತ್ತಾರೆ. ಆದರೆ ಯಾವ ವಿಚಾರಕ್ಕಾಗಿ ಫೊಟೋಗಳನ್ನು ತೆಗೆದಿರುತ್ತಾರೆ ಎಂದು ಹೇಳಲು ಆಗುವುದಿಲ್ಲ. ನಾನು ಸಹಿ ಮಾಡಿದ ಸಂದರ್ಭದಲ್ಲಿ 1 ರಿಂದ 3 ನೇ ಆರೋಪಿತರು ಜೀಪಿನ ಒಳಭಾಗದಲ್ಲಿ ಕುಳಿತಿದ್ದರು. ಫೊಟೋಗಳನ್ನು ತೆಗೆಯುವ ಸಂದರ್ಭದಲ್ಲಿ ಸಹ ಅವರುಗಳು ಹಾಜರಿದ್ದರು.

**(ಈ ಹಂತದಲ್ಲಿ ಸದ್ರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಸ.ಸ.ಅ. ರವರು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು)**

**ಪಾಟೀ ಸವಾಲು –ಸಹಾಯಕ ಸರಕಾರಿ ಅಭಿಯೋಜಕರವರಿಂದ**

ದಿಃ 02-07-2019 ರಂದು ಪೊಲೀಸನವರು ನನ್ನನ್ನು ಮತ್ತು ಚಾಸಾ.8 ರವರನ್ನು ಠಾಣೆಗೆ ಬರ ಮಾಡಿಕೊಂಡು ಅವರ ವಶದಲ್ಲಿ ಇದ್ದ 1 ಮತ್ತು 2 ನೇ ಆರೋಪಿತರನ್ನು ತೋರಿಸಿರುತ್ತಾರೆ ಎಂದರೆ ಸರಿಯಲ್ಲ. ಪೊಲೀಸನವರ ವಶದಲ್ಲಿದ್ದ 1 ಮತ್ತು 2 ನೇ ಆರೋಪಿತರು ನನ್ನ ಸಮಕ್ಷಮದಲ್ಲಿ ಅವರು ದ್ವಿಚಕ್ರ ವಾಹನ ಕಳವು ಮಡಿದ ಸ್ಥಳ ಹಾಗೂ ವಾಹನಗಳನುನ ಬಿಟ್ಟು ಹೋದ ಸ್ಥಳವನ್ನು ತೋರಿಸುವುದಾಗಿ ತಿಳಿಸಿದರುಎಂದರೆ ಸರಿಯಲ್ಲ. 1 ಮತ್ತು 2 ನೇ ಆರೋಪಿತರು ನೀಡಿದ ಮಾಹಿತಿಯ ಮೇರೆಗೆ ಹಾಗೂ ಅವರ ಮಾರ್ಗದರ್ಶನದಂತೆ ಪೊಲೀಸನವರು ನನ್ನನ್ನು ಮತ್ತು ಚಾಸಾ.8 ರವರನ್ನು ಆರೋಪಿತರು ತೋರಿಸಿದ ಸ್ಥಳಕ್ಕೆ ಕರೆದುಕೊಂಡು ಹೋದರು ಎಂದರೆ ಸರಿಯಲ್ಲ. ಆರೋಪಿತರು ಸದ್ರಿ ಸ್ಥಳಗಳನ್ನು ತೋರಿಸಿದ ಮೇರೆಗೆ ನನ್ನ ಮತ್ತು ಚಾಸಾ.8 ರವರ ಸಮಕೆಮದಲ್ಲಿ ನಿಪಿ.10 ರಂತೆ ಪಂಚನಾಮೆಯನ್ನು ಜರುಗಿಸಿರುತ್ತಾರೆ ಎಂದರೆ ಸರಿಯಲ್ಲ. ಸದ್ರಿ ಪಂಚನಾಮೆಯನ್ನು ಜರುಗಿಸಿದ ಸಂದರ್ಭದಲ್ಲಿಯೇ ನಿಪಿ.11 ಮತ್ತು 12 ರ ಫೊಟೋಗಳನ್ನು ತೆಗೆಯಲಾಗಿರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರಿದು ಫೊಟೋಗಳನ್ನು ತೆಗೆದಿರುತ್ತಾರೆ ಆದರೆ ಯಾವ ಉದ್ದೇಶಕ್ಕೆ ತೆಗೆದಿರುತ್ತಾರೆ ಎಂದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಿಪಿ.10 ಕ್ಕೆ ನಾನು ಆರೋಪಿತರು ತೋರಿಸಿದ ಸ್ಥಳದಲ್ಲಿ ಸಹಿ ಮಾಡಿದ್ದರೂ ಸಹ ಬಸ್ ನಿಲ್ದಾಣದ ಬಳಿ ಸಹಿ ಮಾಡಿರುವುದಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಸಹಿ ಮಾಡಿದ ಸಂದರ್ಭದಲ್ಲಿ ಆರೋಪಿತರು ಸ್ಥಳವನ್ನು ತೋರಿಸಿದ್ದು, ಆ ಬಗ್ಗೆ ನನಗೆ ತಿಳಿದಿದ್ದರೂ ಸಹ ಜೀಪಿನಲ್ಲಿ ಕುಳಿತಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಸಮಕ್ಷಮದಲ್ಲಿ ಪೊಲೀಸನವರು ನಿಪಿ.10 ರಂತೆ ಪಂಚನಾಮೆಯನ್ನು ಜರುಗಿಸಿದ್ದು, ಸದ್ರಿ

**ಸಿ.ಸಿ. ನಂ.: 1312/2020**

ಸಿ.ಡಬ್ಲ್ಯೂ: 9

ಪಿ.ಡಬ್ಲ್ಯೂ: 8

ವಿಚಾರವಾಗಿ ನನಗೆ ಸಂಪೂರ್ಣ ಮಾಹಿತಿ ಇದ್ದರೂ ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಆರೋಪಿತರ ಪರಿಚಯ ಇದ್ದರೂ ಸಹ ಇಲ್ಲವೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರ ಪರಿಚಯ ಇರುವ ಕಾರಣ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು –ಆರೋಪಿತರ ಪರ ಶ್ರೀ ಪಿ.ಎಸ್.ಎನ್. ವಕೀಲರಿಂದ**

ಏನೂ ಇಲ್ಲ ಎಂದು ತಿಳಿಸಿರುತ್ತಾರೆ.

**ಮರು ವಿಚಾರಣೆ – ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

Sd/-

ಪ್ರ.ದ.ನ್ಯಾ.ದಂ., ಕುಮಟಾ